# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162 (ಹೊಸ ಸಂಖ್ಯೆ: 214) ಗಿರಿನಗರ, ಬೆಂಗಳೂರು.

## ಫೆಬ್ರವರಿ 2023 : ವಾರ್ಡ್ ಸಮಿತಿಯ 1ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/ 2020-21, ದಿನಾಂಕ: 22-09-2021.

******

ದಿನಾಂಕ : 04-02-2023
ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ
ಸಮಯ : ಪೂರ್ವಾಹ್ನ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಮೇಶ್ .ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-162, ಗಿರಿನಗರ |
| 3 | ಶ್ರೀಮತಿ ಜಾಹ್ನವಿ ಪ್ರಕಾಶ್ | ಸಹಾಯಕ ಅಭಿಯಂತರರು(ಬೃಹತ್ ನೀರು ಗಾಲುವೆ) |
| 4 | ಶ್ರೀಮತಿ ಉಷಾ .ಸಿ.ಆರ್ | ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 5 | ಶ್ರೀ ಆರ್. ರಾಜಶೇಖರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಶ್ರೀ ದೇವರಾಜ ಅರಸ್ | ಗಿರಿನಗರ ಪೋಲೀಸ್ ಠಾಣೆ ಸಿಬ್ಬಂದಿ |
| 7 | ಶ್ರೀಮತಿ ಕುಮುದ | ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 8 | ಮಸೂದ್ ಖಾನ್ | ತೋಟಗಾರಿಕೆ ಇಲಾಖೆ |
| 9 | ಶ್ರೀ ಆರ್. ಸತೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು (ಗಿರಿನಗರ ವಾರ್ಡ್) |
| 10 | ಶ್ರೀ ಆನಂದ್ | ಬನಶಂಕರಿ ವೆಲ್ಫೇರ್ ಅಸೋಸಿಯೇಷನ್ |
| 11 | ಶ್ರೀ ಪ್ರಸನ್ನ | ಸಾರ್ವಜನಿಕರು |
| 12 | ಶ್ರೀ ಎಲ್. ಜೀವನ್ | ಸಾರ್ವಜನಿಕರು |
| 13 | ಶ್ರೀ ಸತೀಶ್ .ಸಿ | ಸೂಪರ್‌ವೈಸರ್, ಫ,ತ್ಯಾನಿ |
| 14 | ಹೆಚ್.ಆರ್. ಆನಂದ ಕೃಷ್ಣ | ಸಾರ್ವಜನಿಕರು |
| 15 | ಶ್ರೀ ಎಸ್.ಎಂ.ಆರ್ ಪ್ರಸಾದ್ | ಸಾರ್ವಜನಿಕರು |
| 16 | ಶ್ರೀ ಲಕ್ಷ್ಮೀಶ | ಸಾರ್ವಜನಿಕರು. |
| 17 | ಶ್ರೀ ಕೆಂಪಣ್ಣ | ಸಾರ್ವಜನಿಕರು. |
| 18 | ಶ್ರೀ ಆರ್. ಪ್ರಭಾಕರ್ | ಸಾರ್ವಜನಿಕರು. |
| 19 | ಶ್ರೀ ನರಸಿಂಹ ಐತಾಳ್ | ಸಾರ್ವಜನಿಕರು. |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿ ನಾಗೇಂದ್ರ ಬ್ಲಾಕ್, 4ನೇ ಮುಖ್ಯರಸ್ತೆ, ಮತ್ತು ರಾಘವೇಂದ್ರ ಬ್ಲಾಕ್ 10ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ಕೊಳವೆಗಳನ್ನು ಬದಲಾಯಿಸುವ ಕಾಮಗಾರಿ ಕೈಗೊಂಡಿರುವುದಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸಭೆಗೆ ತಿಳಿಸಿದರು..

2. ಗಿರಿನಗರ ವಾರ್ಡ್ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 7ನೇ ಬ್ಲಾಕ್ 1ನೇ ಎ ಮುಖ್ಯರಸ್ತೆ ಸ್ವತ್ತಿನ ಸಂಖ್ಯೆ: 786ರ ಬಳಿ ಕುಡಿಯುವ ನೀರು ಸೋರಿಕೆಯನ್ನು ಸರಿಪಡಿಸಲು ಸಭೆಗೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

3. ಗಿರಿನಗರ ವಾರ್ಡ್ 214ರ ವ್ಯಾಪ್ತಿಯಲ್ಲಿ ನಿರ್ಭಯ ಯೋಜನೆಯಲ್ಲಿ ಅಳವಡಿಸಿರುವ ಸಿ.ಸಿ ಕ್ಯಾಮೆರಾಗಳನ್ನು ಗಿರಿನಗರ ಪೋಲೀಸ್ ಠಾಣೆಯಲ್ಲಿ ಮಾನಿಟರ್‌ನಲ್ಲಿ ನಿಗಾವಹಿಸಲಾಗುತ್ತದೆ ಎಂದು ಠಾಣೆಯ ಸಿಬ್ಬಂದಿ ಸಭೆಗೆ ಮಾಹಿತಿ ನೀಡಿದರು. ಈ ಹಿಂದೆ ದಿ:21.01.2023 ರ ಸಭೆಯಲ್ಲಿ ತಿಳಿಸಿದಂತೆ ಸರ್ವೆ ಮಾಡಿದ ಮಾಹಿತಿಯನ್ನು ಶೀಘ್ರವಾಗಿ ಒದಗಿಸುವಂತೆ ಅಧ್ಯಕ್ಷರು ತಿಳಿಸಿದರು.

4. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 7ನೇ ಬ್ಲಾಕ್‌ನಲ್ಲಿ ಕಮ್ಮವಾರಿ ಸಂಘದವರು ನಿರ್ಮಿಸುತ್ತಿರುವ ಕಟ್ಟಡದ ಸಾಮಾಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಿದ್ದು, ಸದರಿ ಸಾಮಾಗ್ರಿಗಳನ್ನು ತೆರವುಗೊಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

5. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ 4ನೇ ಫೇಸ್ ಮುಕ್ತಿಪಥ ಕಟ್ಟಡದ ಬಳಿ ಸಾರ್ವಜನಿಕರು ಕಸವನ್ನು ಎಸೆಯದಂತೆ ನಿಗಾವಹಿಸಲು ಮಾರ್ಷಲ್ ರವರಿಗೆ ಸೂಚಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

6. ಗಿರಿನಗರ 2ನೇ ಫೇಸ್ 1ನೇ ಇ ಅಡ್ಡರಸ್ತೆಗೆ ಹೊಂದಿಕೊಂಡಂತಿರುವ ಅಡ್ಡರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿರುವ ಬೆಸ್ಕಾಂ ಕಂಬವನ್ನು ರಸ್ತೆಬದಿಗೆ ಸ್ಥಳಾಂತರಿಸಲಾಗಿದೆ ಎಂದು ಹಾಜರಿದ್ದ ಬೆಸ್ಕಾಂ ಅಭಿಯಂತರರು ಸಭೆಗೆ ತಿಳಿಸಿದರು.

7. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ 1ನೇ ಸಿ ಮುಖ್ಯರಸ್ತೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಸರಿಯಿಲ್ಲದಿರುವ ಬಗ್ಗೆ ದೂರು ಬಂದಿದ್ದು, ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

8. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 6ನೇ ಬ್ಲಾಕ್, 4ನೇ ಮುಖ್ಯರಸ್ತೆ ಹಾಗೂ 1ನೇ ಅಡ್ಡರಸ್ತೆಗೆ ಹೊಂದಿಕೊಂಡಂತಿರುವ ಸಿ.ಎ ನಿವೇಶನದ ಬಳಿ ಸಾರ್ವಜನಿಕರು ಕಸವನ್ನು ಎಸೆಯದಂತೆ ನಿಗಾವಹಿಸಲು ಮಾರ್ಷಲ್ ರವರಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

9. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ 4ನೇ ಫೇಸ್ ರಾಜಕಾಲುವೆ ಮೇಲೆ 80 ಅಡಿ ಮುಖ್ಯರಸ್ತೆಯಿಂದ ನೆಪರು ರಸ್ತೆಯವರೆಗೂ ವಾಹನಗಳ ನಿಲುಗಡೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಸಂಚಾರ ಪೋಲೀಸ್ ಠಾಣೆ ಸಿಬ್ಬಂದಿಗಳಿಗೆ ತಿಳಿಸಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

10. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಶ್ರೀವಿದ್ಯಾನಗರ ಉದ್ಯಾನವನದಲ್ಲಿ ಬೋರ್‌ವೆಲ್ ಸ್ಥಗಿತಗೊಂಡಿದ್ದು, ಸದರಿ ಬೋರ್‌ವೆಲ್‌ನ್ನು ತುರ್ತಾಗಿ ದುರಸ್ಥಿಗೊಳಿಸಲು ಮತ್ತು ಅಲ್ಲಿಯವರೆಗೂ ಟ್ಯಾಂಕರ್ ಮೂಲಕ ನೀರನ್ನು

ಸರಬರಾಜು ಮಾಡಲು ಸಭೆಯಲ್ಲಿ ಹಾಜರಿದ್ದ ತೋಟಗಾರಿಖಾ ಇಲಾಖಾ ಸಿಬ್ಬಂದಿಗೆ ಅಧ್ಯಕ್ಷರು ಸೂಚಿಸಿದರು.

11. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ 80 ಅಡಿ ಮುಖ್ಯರಸ್ತೆ ಮತ್ತು ನೆಹರು ರಸ್ತೆಗೆ ಹೊಂದಿಕೊಂಡಂತಿರುವ ಖಾಲಿ ನಿವೇಶವನ್ನು ಸ್ವಚ್ಚಗೊಳಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

12. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 7ನೇ ಬ್ಲಾಕ್ 1ನೇ ಎ ಮುಖ್ಯರಸ್ತೆಯಲ್ಲಿ ಪೌರಕಾರ್ಮಿಕರು ಹಸಿಕಸ ಮತ್ತು ಒಣಕಸ ವಿಂಗಡಣೆ ಮಾಡುತ್ತಿಲ್ಲವೆಂದು ದೂರು ಬಂದಿದ್ದು, ಪರಿಶೀಲಿಸಿ ಕ್ರಮಕೈಗೊಂಡು ವರದಿಯನ್ನು ಸಭೆಗೆ ತಿಳಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

13. ಬಸವನಗುಡಿ ವಿಭಾಗದ ಆರೋಗ್ಯ ವೈದ್ಯಾಧಿಕಾರಿ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದಾಗಿ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದ್ದು, ಕೂಡಲೇ ಸದರಿ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಬಸವನಗುಡಿ ವಿಭಾಗ ಆರೋಗ್ಯ ವೈದ್ಯಾಧಿಕಾರಿಗಳಿಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

14. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ 8ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ವಾಲಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

15. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಶ್ರೀವಿದ್ಯಾನಗರ 3ನೇ ಮುಖ್ಯರಸ್ತೆಯಲ್ಲಿ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದಿಂದ ರಸ್ತೆಬದಿ ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ತಿಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

16. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಶ್ರೀವಿದ್ಯಾನಗರ ಬಸ್ ನಿಲ್ದಾಣದ ಕಟ್ಟಡ ಮತ್ತು ಆವರಣವನ್ನು ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಬಿ.ಎಂ.ಟಿ.ಸಿ ಅಧಿಕಾರಿಗಳಿಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

17. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 6ನೇ ಬ್ಲಾಕ್, 4ನೇ ಮುಖ್ಯರಸ್ತೆ ಹಾಗೂ 1ನೇ ಅಡ್ಡರಸ್ತೆಗೆ ಹೊಂದಿಕೊಂಡಂತಿರುವ ಸಿ.ಎ ನಿವೇಶನದ ದಾಖಲಾತಿಗಳನ್ನು ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಶ್ರೀ ಎಸ್.ಎಂ.ಆರ್. ಪ್ರಸಾದ್ ರವರಿಂದ ಪಡೆದು ಸದರಿ ಸಿ.ಎ ನಿವೇಶನದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಿಸುವ ಬಗ್ಗೆ ಸಂಬಂಧಪಟ್ಟ ಬಿ.ಡಿ.ಎ ಅಧಿಕಾರಿಗಳಿಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು".

04/02/2023

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.